

ಯಾಕುಟ್ಸ್ಕ್ ವ್ಯಕ್ತಿ ಜತೆ ನಿಧಿ




ಮಾಡಿದ್ದರು. ಅವರಿಂದ ಮಾಹಿತಿಯನ್ನು ಕಲೆಹಾಕಿದ್ದೆ. ಆದರೂ ಡಿಸಂಬರ್ ನ ಚಳಿಯಲ್ಲಿ ವಾಹನವನ್ನು ಓಡಿಸುತ್ತಿದ್ದಾಗ ಪದೇ ಪದೇ ಇದು ಊಹೆಗೂ ನಿಲುಕದ ಅನುಭವ, ನನ್ನನ್ನು ನಾನೇ ಪರೀಕ್ಷಿಸಿಕೊಳ್ಳುವ ಘಳಿಗೆ, ಇದನ್ನು ಗೆದ್ದು ಬಂದರೆ ನಾನೇ ಧನ್ಯ ಎಂದೆನಿಸುತ್ತಿತ್ತು. ಆ ಭಾವನೆಗಳನ್ನು ಮಾತಿನಲ್ಲಿ ವಿವರಿಸುವುದು ಕಷ್ಟ.'

'ಈ ಎಲ್ಲಾ ಸಂದರ್ಭದಲ್ಲೂ ತುಂಬಾ ಅತಂತ್ರದ ಭಾವನೆಯಿತ್ತು. ಆ ತೀವ್ರ ಚಳಿಗೆ ನನ್ನ ದೇಹ ಹೇಗೆ ಸ್ಪಂದಿಸಬಹುದು? ಕೇವಲ ಹತ್ತು ನಿಮಿಷಗಳು ಮಾನವ ಚರ್ಮ ಆ ಚಳಿಗೆ ಒಡ್ಡಿಕೊಂಡರೆ ಸಾವೇ ಉಂಟಾಗಬಹುದು. ಅಂಥದ್ದರಲ್ಲಿ ನಾನು ಬದುಕುತ್ತೀನಾ.. ಎಂದೆಲ್ಲಾ ಚಿಂತೆ. ಅಪರೂಪಕ್ಕೆ ಚಳಿಗಾಲದಲ್ಲಿ ಈ ಸಾಹಸವನ್ನು ಮಾಡಿದ್ದ ಬೆರಳೆಣಿಕೆಯಷ್ಟು ಮಂದಿಯನ್ನು ನೆನಪಿಸಿಕೊಂಡು ನಾನೂ ಕೂಡ ಇದನ್ನು ಮಾಡಬಲ್ಲೆ ಎಂದು ಧೈರ್ಯ ತಂದುಕೊಳ್ಳುತ್ತಿದ್ದೆ. ನನ್ನದೂ ಒಂಥರದ ಅನ್ವೇಷಣೆಯಲ್ಲವೇ!'

## ಏನನ್ನೂ ಬೆಳೆಯದ ಪ್ರದೇಶ

ಯಾಕುಟ್ಸ್ಕ್ ಜನರ ಬಗ್ಗೆ ಸ್ವಲ್ಪ ಓದಿದರೆ ತಿಳಿದುಬರುವುದು ಅವರ ಅಸಾಮಾನ್ಯ ದೃಢ ಸ್ವಭಾವ. ಸಖಾ ಯಾಕುಟಿಯ ರಿಪಬ್ಲಿಕ್ ಪ್ರದೇಶದ ರಾಜಧಾನಿ ಯಾಕುಟ್ಸ್ಕ್. ಇಲ್ಲಿಂದ ಎರಡು ದಿನ ಪ್ರಯಾಣಿಸಿದರೆ ಸಿಗುವುದು ಒಯ್ಮ್ಯಾಕೋನ್ ಹಳ್ಳಿ. ಜನಸಂಖ್ಯೆ ಸುಮಾರು 500. ಇಲ್ಲೇ ಹುಟ್ಟಿ ವಾಸಿಸುವ ಜನರಿಗೆ ಚಳಿ, ಕತ್ತಲೆ ಎಂಬ ಪದಗಳು ಭಯ ಹುಟ್ಟಿಸುವುದಿಲ್ಲ. ಅದರಲ್ಲೂ ಇರುವ ನೈಸರ್ಗಿಕ ಸೌಂದರ್ಯವನ್ನು, ನಿಸರ್ಗದ ಸರಳತೆಯನ್ನು ಜನ ಒಪ್ಪಿಕೊಂಡು ಶಾಂತವಾಗಿ ಪ್ರಕೃತಿಯಲ್ಲಿ ತಾವೂ ಒಂದು ಭಾಗವೆಂದು ಸಹಜವಾಗಿ ಬದುಕುತ್ತಾರೆ. ಹವಾಮಾನದ ಶಾಖ –52 ಡಿಗ್ರಿಯಿಂದ ಇಳಿದರೆ ಮಾತ್ರ ಊರಲ್ಲಿರುವ ಏಕೈಕ ಶಾಲೆಯನ್ನು ಮುಚ್ಚಲಾಗುತ್ತದೆ. ಏನನ್ನೂ ಬೆಳೆಯಲಾಗದ ಪ್ರದೇಶದಲ್ಲಿ ಜನರು ತಿನ್ನುವುದು ಜಿಂಕೆ ಮತ್ತು ಕುದುರೆ ಮಾಂಸ. ಆದರೂ ಅವರಿಗೆ ಯಾವುದೇ ಆರೋಗ್ಯ ಸಮಸ್ಯೆಯಿಲ್ಲ! ಅಲ್ಲಿಗೆ ಬಂದು ಹೋಗುವವರು ತಮ್ಮ ವಾಹನಗಳ ಎಂಜಿನ್ ಆಫ್ ಮಾಡುವುದೇ ಇಲ್ಲ, ಮಾಡಿದರೆ ಮತ್ತೆ ಎಂಜಿನ್ ಶುರುವಾಗುವುದೇ ಸಂಶಯ!

ನಿಧಿಯವರ ಮೊದಲ ಯೋಜನೆ ಇದ್ದದ್ದು– ಯಾಕುಟ್ಸ್ಕ್ ನಿಂದ ಮಗದಾನ್ ವರಗೆ ಇರುವ ಕೊಲಿಮ ಹೈವೇಯನ್ನು ಬಾಡಿಗೆಗೆ ಪಡೆದ ಕಾರಿನಲ್ಲಿ ಕ್ರಮಿಸುವುದು. ಈ ಹೆದ್ದಾರಿಯನ್ನು 1930ರಲ್ಲಿ ಸಾವಿರಾರು ಖೈದಿಗಳು ನಿರ್ಮಿಸಿದ್ದರು. ಆ ಖೈದಿಗಳು ಸಾಯಲೆಂದೇ ಅವರನ್ನು ಈ ರಸ್ತೆ ನಿರ್ಮಾಣ ಕೆಲಸಕ್ಕೆ ಹಾಕಿದ್ದರಂತೆ. ಹಾಗಾಗಿ ಈ ಹೆದ್ದಾರಿಗೆ 'ರೋಡ್ ಆಫ್ ಬೋನ್ಸ್' ಎಂಬ ಅಡ್ಡ ಹೆಸರು. ಈ ಹೆದ್ದಾರಿಯಲ್ಲಿ ಸಾಗುವಾಗ ನಿಧಿಯವರಿಗೆ ನಾನಾ ಥರದ ಭಾವನೆಗಳು ಉಂಟಾದವಂತೆ. ಆರಂಭದಲ್ಲಿ ಸ್ವಲ್ಪ ಅಧೀರತೆ ಇದ್ದರೂ ಕ್ರಮೇಣ ತಾನೊಬ್ಬಳೇ ವಾಹನದಲ್ಲಿ ಇರುವುದು, ರಾತ್ರಿಯೆಲ್ಲ ಮತ್ತು ದಿನಕ್ಕೆ 12 ಘಂಟೆಗಳ ಕಾಲ ಡ್ರೈವ್ ಮಾಡುವುದು ಅಭ್ಯಾಸವಾಯಿತು.

'ಪೋಲ್ ಆಫ್ ಕೋಲ್ಡ್ ತಲುಪಿದಾಗ ಬೆನ್ನಲ್ಲಿ ಚಳಿ ಹುಟ್ಟಿತು. ಚರ್ಮದ ಮೇಲೆ ರೋಮಾಂಚನದ ಗುಳ್ಳೆಗಳು ಎದ್ದವು. ಕಡೆಗೂ ಆ ತೀವ್ರ ಹವಾಮಾನದ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಬದುಕುಳಿದಿದ್ದು, ನನ್ನ ಅತಿ ಸಾಹಸದ ಡ್ರೈವಿಂಗ್ ಕಲೆಯನ್ನು (**Extreme Overlander**) ಸಾಬೀತು ಪಡಿಸಿದ್ದು ಜೀವನದ ಅತ್ಯಂತ ಹೆಮ್ಮೆಯ ಕ್ಷಣಗಳಾಗಿದ್ದವು' ಎನ್ನುತ್ತಾರೆ ನಿಧಿ. ಈ ಅನ್ವೇಷಕ ಪ್ರಯಾಣವನ್ನು ಏಕಾಂಗಿಯಾಗಿ ಮಾಡಿದ ಮೊದಲ ಭಾರತೀಯಳು ಎಂಬುದು ಅವರಿಗೆ ಇನ್ನೂ ಹೆಗ್ಗಳಿಕೆಯ ವಿಷಯವಾಗಿದೆ.

ನಿಧಿಯವರ ಈ ಏಕಾಂಗಿ ಅನ್ವೇಷಕ ಯಾತ್ರೆ ಮಹಿಳೆಯರಿಗೂ, ಪುರುಷರಿಗೂ ಕಣ್ತೆರೆಸುವಂತಿದೆ. 'ನಾನು ಅನೇಕ ಮಹಿಳೆಯರನ್ನು ಕೇಳುತ್ತೀನಿ– ನೀವೂ ಕೂಡ ಯಾಕೆ ಇಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದಿಲ್ಲ ಎಂದು. ಅನೇಕರು ತಮ್ಮ ಆರಾಮದ ಜೀವನ ಬಿಟ್ಟುಬರದ ಅಥವಾ ತಮಗೆ ರೂಢಿಯಾಗಿರುವ ಸಾಮಾಜಿಕ ಚೌಕಟ್ಟಿನೊಳಗೆ ಉಳಿಯುವ ತಮ್ಮ ಆಯ್ಕೆಯನ್ನು ಹೇಳುತ್ತಾರೆ. ನನ್ನ ಸಾಹಸಿ ಮನೋಭಾವವನ್ನ ಮೆಚ್ಚಿಕೊಂಡರೂ ಅದನ್ನು ಒಂಥರಾ ವೈಭವೀಕರಣ ಮಾಡುವ ಮಹಿಳೆಯರೇ ಹೆಚ್ಚು. ಅವರಲ್ಲಿ ಉತ್ತಮ ಶಿಕ್ಷಣ ಪಡೆದಿರುವವರೂ, ಸಮಾಜದ ಮೇಲುಸ್ತರದಲ್ಲಿ ಇರುವವರೂ ಇದ್ದಾರೆ. ಆದರೆ ತಮ್ಮ ಚೌಕಟ್ಟನ್ನು ಮೀರಿ ಆಚೆ ಕಾಲಿಡಲು ಅವರು ಒಪ್ಪುವುದಿಲ್ಲ. ಹಾಗಾಗಿ ನನ್ನ ಬಗ್ಗೆ ಪ್ರಶ್ನೆಗಳೇ ಹೆಚ್ಚು, ನನ್ನ ಅನುಭವಗಳ ಬಗ್ಗೆ ಕೇಳುವವರು ಕಡಿಮೆ' ಎನ್ನುತ್ತಾರೆ ನಿಧಿ.

ನಿಧಿಯವರ ಏಕಾಂಗಿ ಸಾಧನೆ ಜಯ ಅಥವಾ ಅಪಜಯಗಳ ಬಗ್ಗೆ ಮಾತನಾಡುವುದಿಲ್ಲ. ಅದು ಹೇಳುವುದು ಜೀವಂತ ಅನುಭವದ ಬಗ್ಗೆ. ಆ ಕ್ಷಣಗಳಲ್ಲಿ ಕಾಣುವ ಮಾನವ ಸ್ವಭಾವದ ಬಲಹೀನತೆ ಅಥವಾ ಮನೋದೃಢತೆಯ – ಬಗ್ಗೆ. ನಾವೆಲ್ಲರೂ ಮಾತನಾಡುವ ಆತ್ಮ ವಿಶ್ವಾಸ, ನಂಬಿಕೆ ಮತ್ತು ಆಶಾದಾಯಕ ಮನೋಭಾವನೆಯ ಕುರಿತು.

ಕನ್ನಡತಿ ನಿಧಿ ತಿವಾರಿ ರೋಡ್ ಆಫ್ ಬೋನ್ಸ್ ಗೆ ಹೋಗಿ ಬರುವ ಮೂಲಕ 'ಮಾನವ ಪ್ರಯತ್ನಕ್ಕೆ ಸಾಟಿಯಿಲ್ಲ' ಎಂದು ಸಾಬೀತು ಪಡಿಸಿದ್ದಾರೆ.